Maintenance of Rural Communications

158. Smt. WINNIFRED F. FERNANDES (Coondapur).—Will the Minister for Development be pleased to state:—

(*a*) whether the Government in their letter No. DPC 16 BGI 66, dated 5th September 1967 have ordered that the maintenance of Rural Communications and similar other roads in South Kanara District constructed by the P.W.D. should be transferred to the control of the Taluk Development Boards of the concerned area;

(*b*) whether the Taluk Boards have agreed to this transfer; the number of them that have not agreed and the reason for the same;

(*c*) whether there is any move to take any action against Taluk Development Boards who have not agreed to this transfer;

(*d*) the total mileage of such roads in each Blocks, in the District of South Kanara, proposed to be transferred to the respective Taluk Development Boards?

A.—Sri P. M. NADGOUDA (Minister for Development).—

(*a*) Yes.

(*b*) No.

(*c*) Under consideration of Government.

(*d*) The total mileage of such roads in each Block in South Kanara District is as under:—

Name of the block	*Total milage*	
	M.	*F.*
1. Karkal	69	6
2. Coondapur	74	0
3. Puttur	59	4
4. Buntwal	30	5
5. Udipi	34	1
6. Mangalore	93	2½
7. Sullia	57	4
8. Belthangady	66	0
	484	6½

Smt. WINNIFRED F. FERNANDES.—Supplementary to (*b*): What are the reasons the Taluk Development Boards have stated for the non-transfer of these roads to them?

†Sri P. M. NADGOUDA.—The Taluk Development Boards are not in a position to spend the money on these roads which are being proposed to be transferred to them. Government is aware that nearly 12,000 mile roads are being transferred to the Taluk Development Boards and in view of the difficulties experienced by them, Government have now decided to transfer all the land revenue to these bodies.

Smt. WINNIFRED F. FERNANDES.—In Coondapur and Udipi Taluks the total mileage of roads is 74 and 34 mile 1 furlong respectively which are not maintained either by the P.W.D. or by the Taluk Development Boards. Will the Hon'ble Minister see that in future these roads are asphalted ?

Sri P. M. NADGOUDA.—It is neither possible for the Government nor for the Taluk Boards to asphalt these roads. But I assure the Hon'ble Member that at least these roads will be made usable ones.

ಶ್ರೀ ಬಿ. ಪರಮೇಶ್ವರಪ್ಪ.—ಪಿ.ಡಬ್ಲ್ಯು.ಡಿ. ಅವರ ವಶದಲ್ಲಿದ್ದ ಗ್ರಾಮಾಂತರ ರಸ್ತೆಗಳನ್ನು ಪಕ್ಕಾರಸ್ತೆಗಳನ್ನಾಗಿ ಮಾಡಿಸುತ್ತೇವೆಂದು ಹೇಳಿ ಅವನ್ನು ಹಣವಿಲ್ಲದೆ ಇರತಕ್ಕ ಟಿ.ಡಿ.ಬಿ. ಗಳಿಗೆ ವಹಿಸಿರತಕ್ಕದ್ದು ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ಎಷ್ಟಿದೆ ಎಂದು ಡಡದಲ್ಲಿ ನಿಂತು ಕೇಳತಕ್ಕ ಪೋಸಗಾರಂತೆ ನೀವು ಮಾಡಿರತಕ್ಕ ಯೋಜನೆ ತಪ್ಪಾಗಿದೆ ಎಂಬುದು ನಿಮಗೆ ಇನ್ನೂ ಮನವರಿಕೆಯಾಗಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಆ ಕೆಲಸಗಳನ್ನು ತಾಲ್ಲೂಕಾ ಬೋರ್ಡ್ನವರು ಮಾಡಲಿ ಅಥವಾ ಪಿ.ಡಬ್ಲ್ಯು.ಡಿ. ಅವರೇ ಮಾಡಲಿ ಆ ಎರಡಕ್ಕೂ ರೊಕ್ಕ ಬರತಕ್ಕ ಮಾರ್ಗ ಒಂದೇ ಆಗಿರುತ್ತದೆ. ಆ ತಾಲ್ಲೂಕಾ ಬೋರ್ಡುಗಳಿಗೆ ಹೆಚ್ಚಿನ ಗ್ರಾಂಟನ್ನು ಕೊಡುವುದಕ್ಕೆ ಪ್ರಯತ್ನಮಾಡಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇದು ಉಡುಪಿ ತಾಲ್ಲೂಕಿನಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಅಲ್ಲಿ ಕುಂಜಾರಿಗರಿ ಎಂಬ ರಸ್ತೆಯನ್ನು ದುರಸ್ತಿಮಾಡುವುದಕ್ಕೆ ಮಂಜೂರಾಗಿದ್ದ 20 ಸಾವಿರ ರೂಪಾಯಿಗಳ ಫಂಡನ್ನು ಆ ರಸ್ತೆ ಕೆಲಸಕ್ಕೆ ಉಪಯೋಗ ಮಾಡದೆ ಅದನ್ನೀಗ ಬೇರೆ ಕಡೆಗೆ ಡೈವರ್ಟ್ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ. ಅದನ್ನು ಹಾಗೆ ಡೈವರ್ಟ್ ಮಾಡದಂತೆ ಒಂದು ತಡೆ ಆಜ್ಞೆಯನ್ನು ಸರ್ಕಾರದವರು ಹೊರಡಿಸುತ್ತಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ವಿಷಯ ನನಗೆ ಸಂಬಂಧವಿಲ್ಲ. ಅದನ್ನು ಬಹುಶಃ ಪಿ. ಡಬ್ಲ್ಯು. ಡಿ. ಅವರನ್ನು ಕೇಳಿದರೆ ಸರಿಯಾದ ವಿಚಾರ ಗೊತ್ತಾಗಬಹುದು.

Sri K. H. PATIL.—May I know whether it is the opinion of the Hon'ble Minister for Development that none of the Taluk Boards in the State have agreed to transfer the roads to the State Government ?

Sri P. M. NADGOUDA.—Some of them have not agreed, some of them have agreed to take over the roads, and some are pressing the Government to hand over more roads to them for maintenance and repairs.

ಶ್ರೀಮತಿ ಕೆ. ಲೀಲಾವತಿ ರೈ.—ಈ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಎಲ್ಲಾ ರಸ್ತೆಗಳ ದುರಸ್ತಿಯನ್ನೂ ಒಂದಾನೊಂದು ಕಾಲಕ್ಕೆ ಪಿ.ಡಬ್ಲ್ಯು.ಡಿ. ಅವರೇ ಮಾಡುತ್ತಿದ್ದರು. ಆದರೆ ಈಗ ಆ ಕೆಲಸವನ್ನು ಸರ್ಕಾರದವರು ತಾಲ್ಲೂಕ್ ಡೆವಲಪ್ಮೆಂಟ್ ಬೋರ್ಡುಗಳಿಗೆ ವಹಿಸಿದ್ದರೂ ಅವರಲ್ಲಿ ಹಣವಿಲ್ಲ. ಆದ್ದರಿಂದ ಆ ರಸ್ತೆಗಳ ದುರಸ್ತಿಯನ್ನು ಮತ್ತೆ ಪಿ.ಡಬ್ಲ್ಯು.ಡಿ. ಅವರ ಮೂಲಕವೇ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಪಿ.ಎಂ. ನಾಡಗೌಡ.—ಹಾಗೆ ಪಿ.ಡಬ್ಲ್ಯು.ಡಿ. ಅವರಿಂದ ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವನ್ನು ಟಿ.ಡಿ.ಬಿ. ಅವರೇ ಮಾಡಬೇಕು. ಅವಕ್ಕೆ ಹೆಚ್ಚಿನ ಗ್ರಾಂಟನ್ನು ಕೊಡಲಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮಲ್ಲಿ ಸುಮಾರು 13 ಸಾವಿರ ಮೈಲಿ ರೂರಲ್ ಕಮ್ಯುನಿಕೇಷನ್ ರೋಡ್ ಬಹಳ ವರ್ಷಗಳಿಂದಲೂ ರಿಪೇರಿಯಿಲ್ಲದೆ ಹಾಳಾಗುತ್ತಿದೆ. ಅದನ್ನು ಪಿ.ಡಬ್ಲ್ಯು.ಡಿ. ಅವರ ಮೂಲಕ ಮಾಡಿಸಿ, ಇಲ್ಲವೇ ತಾಲ್ಲೂಕಾ ಬೋರ್ಡ್‌ಗಳಿಗೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡುತ್ತೀರಾ ?

Sri P. M. NADGOUDA.—It is awaiting the decision of the Government of India. We have requested the Government of India to give us 20 per cent of the expenditure for the improvement of Rural communication roads in the Fourth Five Year Plan. For P.W.D. roads 20 per cent should be spent by the T. D. Boards. It is pending at that stage.

ಅದನ್ನು ಇನ್ನೂ ಅಖೈರಾಗಿ ತೀರ್ಮಾನ ಮಾಡಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ತಾಲ್ಲೂಕಿನಲ್ಲಿರತಕ್ಕ ರಸ್ತೆಗಳಲ್ಲಿ ರಿಪೇರಿ ಇಲ್ಲದೆ ಬಹಳ ಹಾಳಾಗಿವೆ. ಅವುಗಳನ್ನು ದುರಸ್ತಿಮಾಡಲು ತಾಲ್ಲೂಕಾ ಬೋರ್ಡ್‌ಗಳಲ್ಲಿ ಹಣವಿಲ್ಲ. ಆದ್ದರಿಂದ ಅವುಗಳನ್ನು ಪಿ.ಡಬ್ಲ್ಯು.ಡಿ. ಇಂದ ಮಾಡಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಹಾಲಿ ಇರತಕ್ಕ ಪಿ.ಡಬ್ಲ್ಯು.ಡಿ. ಸಬ್‌ಡಿವಿಜನ್‌ಗಳೇನಿವೆ ಅವುಗಳಿಗೆ ಸಾಕಷ್ಟು ಈ ದಿವಸ ವರ್ಕ್‌ಲೋಡ್ ಇರುವುದಿಲ್ಲ. ಆದ್ದರಿಂದ ಅವುಗಳಿಗೆ ಸಾಕಷ್ಟು ವರ್ಕ್ ಲೋಡನ್ನು ಒದಗಿಸತಕ್ಕ ದೃಷ್ಟಿಯಿಂದ ಈ ತಾಲ್ಲೂಕ್ ಬೋರ್ಡ್‌ಗಳಿಗೆ ವಹಿಸಿರತಕ್ಕ ರಸ್ತೆ ದುರಸ್ತಿ ಕೆಲಸವನ್ನು ಮತ್ತೆ ಪಿ.ಡಬ್ಲ್ಯು.ಡಿ.ಗೆ ವಹಿಸುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ಸಲಹೆಯನ್ನು ಒಪ್ಪುವುದಕ್ಕಾಗುವುದಿಲ್ಲ. ಹಾಗೆ ಮಾಡಿದರೆ ನಾವು ಡೆಮಾಕ್ರೆಸಿಯನ್ನೆಕ್ಕೆ ಬಿಟ್ಟ ಹಾಗೆ ಆಗುತ್ತದೆ.

ಶ್ರೀ ಎಸ್. ಎನ್. ಅರಕೇರಿ. ಈ ರಸ್ತೆಗಳ ಮೈಂಟೆನೆನ್ಸ್ ಕೆಲಸವನ್ನು ತಾಲ್ಲೂಕಾ ಬೋರ್ಡ್‌ಗಳಿಗೆ ವಹಿಸಿ 2—3 ವರ್ಷಗಳ ಮೇಲಾಯಿತು. ಆ ಅನುಭವವನ್ನೂ ನೋಡಿದಾಯಿತು. ಆದರೆ ಆ ಅನುಭವದ ಪ್ರಕಾರ ಅವುಗಳಿಗೆ ಈ ಕಾರ್ಯಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಕಂಡುಬಂದಿರುವುದರಿಂದ ಇನ್ನು ಮುಂದಕ್ಕೆ ಈ ಕಾರ್ಯವನ್ನು ಪಿ.ಡಬ್ಲ್ಯು.ಡಿ.ಗೆ ವಹಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಪಿ.ಎಂ. ನಾಡಗೌಡ.—ಈ ದಿವಸ ತಾಲ್ಲೂಕ್ ಬೋರ್ಡ್‌ಗಳಿಗೂ ಮತ್ತು ಪಿ.ಡಬ್ಲ್ಯು.ಡಿ.ಗೂ ಎರಡಕ್ಕೂ ಯಾವ ಪ್ರತ್ಯಾಸವೂ ಇಲ್ಲ. ಆದ್ದರಿಂದ ಬದಲಾವಣೆ ಅನಗತ್ಯ.

ಶ್ರೀಮತಿ ಕೆ. ಲೀಲಾವತಿ ರೈ.—ಈಗತಾನೆ ಮಂತ್ರಿಗಳು ತಾಲ್ಲೂಕ್ ಬೋರ್ಡ್‌ಗಳಿಗೂ ಮತ್ತು ಪಿ.ಡಬ್ಲ್ಯು.ಡಿ.ಗೂ ಯಾವ ವ್ಯತ್ಯಾಸವೂ ಇಲ್ಲ ಎಂಬುದಾಗಿ ಹೇಳಿದರು. ಹಿಂದೆ ಪಿ.ಡಬ್ಲ್ಯು.ಡಿ. ಅವರು ರಸ್ತೆಯ ನಿರ್ವಾಣ ಮಾಡತಕ್ಕಂತ ಕಾಲಕ್ಕೆ ನಮ್ಮಲ್ಲಿ ಒಂದು ಮೈಲಿಗೆ ಸುಮಾರು 10 ಸಾವಿರ ಖರ್ಚುಮಾಡಿ 50 ಮೈಲಿ ರಸ್ತೆಯನ್ನು ಮಾಡಿದ್ದರು. ಅಷ್ಟು ರಸ್ತೆಯನ್ನೂ ಈಗ ಮೈಂಟೆನೆನ್ಸ್ ಮಾಡುವುದಕ್ಕೆ ತಾಲ್ಲೂಕಾ ಬೋರ್ಡ್‌ಗಳಿಗೆ ಹಣವೆಲ್ಲಿದೆ, ಅಷ್ಟೂ ಹಣವನ್ನು ಮಂತ್ರಿಗಳು ತಾಲ್ಲೂಕ್ ಬೋರ್ಡ್‌ಗಳಿಗೆ ಒದಗಿಸುತ್ತಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಮೈದಾನದಲ್ಲಿ ಒಂದು ಮೈಲಿಗೆ 6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಮಾಡಿದ್ದರೆ, ಮಲೆನಾಡಿನಲ್ಲಿ ಒಂದು ಮೈಲಿಗೆ 10 ಸಾವಿರ ಖರ್ಚುಮಾಡಿ ರಸ್ತೆಯನ್ನು ನಿರ್ವಾಣಮಾಡಲಾಗಿದೆ. ಅವಕ್ಕಾಗೇ ಈಗ ಟಿ.ಡಿ.ಬಿ. ಅವರಿಗೆ ಹೆಚ್ಚಿನ ಗ್ರಾಂಟ್ ಕೊಡುವುದಕ್ಕೆ ವ್ಯವಸ್ಥೆಮಾಡುತ್ತಿದ್ದೇವೆ.